ಕರೆದು ಅವನಿಗೆ ಸರಿಯಾದ ಸೂಚನೆಗಳನ್ನು ನೀಡಿದ! ಆದಿಮೂರ್ತಿ ಒಳ್ಳೆಮಾತಿನಲ್ಲಿ ಅಂಗಡಿ ಖಾಲಿ ಮಾಡಲು ಒಪ್ಪದಿದ್ದರೆ, ನಯವಾಗಿ ಬೆದರಿಕೆ ಹಾಕಲು ಸಿದ್ದನಿಗೆ ಅನುಮತಿ ಇತ್ತ. ಯಜಮಾನರು ಒಂದು ಮಹತ್ವದ ಕಾರ್ಯವನ್ನು ವಹಿಸಿದ್ದಾರೆ ಎಂದ ಮೇಲೆ ತಾನೂ ಕೂಡ ಅದನ್ನು ಸರಿಯಾಗಿ ನಿರ್ವಹಿಸಬೇಕು ಎಂದು ಭಾವಿಸಿ ಸಿದ್ದ, ಅಂಗಡಿ ಖಾಲಿ ಮಾಡಿಸಲು ಏನೇನು ಮಾತಾಡಬೇಕು, ಹೇಗೆ ಬೆದರಿಸಬೇಕು ಎಂದೆಲ್ಲಾ ಯೋಚಿಸಿ, ಸಂಪೂರ್ಣ ಸಜ್ಜಾಗಿ ಹೊರಟ. ತನ್ನ ದರ್ಪ ತೋರಿಸಿ ಕಾರ್ಯ ಸಾಧಿಸಬೇಕೆಂದು, ಅಂಗಡಿಯನ್ನು ಸಮೀಪಿಸಿದ ನಂತರ ಬೂಟಿನಿಂದ ಜೋರಾಗಿ ಶಬ್ದ ಮಾಡುತ್ತಾ ಇದ್ದ ಎರಡು ಮೆಟ್ಟಿಲನ್ನು ಹತ್ತಿ ಒಳಗೆ ಪ್ರವೇಶಿಸಿದ. ಒಂದು ಕೈಗಡಿಯಾರವನ್ನು ಬಿಚ್ಚಿ ಪರಿಶೀಲಿಸುತ್ತಿದ್ದ ಆದಿಮೂರ್ತಿ ತಲೆಯೆತ್ತಿ ನೋಡಿದ. ಸಿದ್ದ ಶಬ್ದ ಮಾಡುತ್ತಾ ಒಳಗೆ ಬಂದು 'ಯಜಮಾನರು ಹೇಳಿದ್ದಾರೆ, ಆದಷ್ಟು ಬೇಗ ಅಂಗಡಿ ಖಾಲಿ ಮಾಡಬೇಕು! ಇಲ್ಲಾ ಅಂದರೆ ನೀವು ಮುಂದಿನ ಪರಿಣಾಮ ಎದುರಿಸಬೇಕಾಗುತ್ತೆ' ಎಂದು ಅಬ್ಬರಿಸಿದ. ಆಗ ಆದಿಮೂರ್ತಿ ಸಮಾಧಾನದಿಂದ 'ಈಗ ಹನ್ನೆರಡು ಗಂಟೆ ಆಗ್ತಾ ಇದೆ. ಬಿಸಿಲಲ್ಲಿ ಬಂದಿರೋದ್ರಿಂದ ಹೀಗಾಡ್ತ ಇದ್ದೀರ, ಸ್ವಲ್ಪ ಸುಧಾರಿಸಿಕೊಳ್ಳಿ' ಎಂದ. ತನ್ನ ಏರುಧ್ವನಿಯ ಮಾತಿಗೆ ಅಂತಾದ್ದೇ ಪ್ರತಿಕ್ರಿಯೆಯನ್ನು ನಿರೀಕ್ಷಿಸಿದ್ದ ಸಿದ್ದ ಅಂಗಡಿಯಾತನ ಉತ್ತರದಿಂದ ತಬ್ಬಿಬ್ಬಾದ. ಆದರೂ ಸಾವರಿಸಿಕೊಂಡು 'ನೋಡಿ! ನಾನು ಬಂದಿರೋದು ಸುಧಾರಿಸಿ ಕೊಳ್ತಾ ಟೈಮು ವೇಸ್ಟ್ ಮಾಡಕ್ಕಲ್ಲ, ನೀವೂ ಅಷ್ಟೆ! ನಮ್ಮ ಟೈಮು ವೇಸ್ಟ್ ಮಾಡಿಸೋ ಬದಲು ಅಂಗಡಿ ಖಾಲಿ ಮಾಡಿ' ಎಂದ.

'ಇದೇ ಮಾತನ್ನು ನಿಮ್ಮ ಯಜಮಾನರು ಬಂದು ಹೇಳಿಬಿಟ್ಟರೆ ಅಂಗಡಿ ಖಾಲಿ ಮಾಡಿಬಿಡ್ತೀನಿ. ಯಾರ ಸಮಯಾನೂ ವ್ಯರ್ಥ ಆಗೋದು ಬೇಡ' ಎಂದ ಆದಿಮೂರ್ತಿ.

ಅದನ್ನು ಕೇಳಿದ ಸಿದ್ದ ಖುಷಿಯಾಗಿ. 'ಆಯ್ತು, ನೀವು ಸಿದ್ಧತೆ ಮಾಡ್ಕೊಳ್ಳಿ, ನಾನು ಯಜಮಾನರಿಗೆ ಹೇಳ್ತೀನಿ' ಎಂದು ಹೇಳಿ ಹೊರಟ. ತನ್ನ ಕೆಲಸ ಇಷ್ಟು ಸುಲಭವಾಗಿ ಆಗುತ್ತದೆಂದು ಅವನು ಅಂದುಕೊಂಡಿರಲಿಲ್ಲ. ಆದಿಮೂರ್ತಿ ಹೇಳಿದ್ದನ್ನು ರಮೇಶನಿಗೆ ಅರುಹಿದ. ಗಡಿಯಾರದ ಮುಳ್ಳು ಹಿಮ್ಮುಖವಾಗಿ ತಿರುಗಿ ಮತ್ತೆ ಮೊದಲಿನ ಅಂಕಿಗೆ ಬಂದಂತೆ ಅನ್ನಿಸಿತು ರಮೇಶನಿಗೆ. ತನ್ನ ಆಜ್ಞೆಗಾಗಿ ಕಾದು ನಿಂತಿದ್ದ ಸಿದ್ದನಿಗೆ 'ಆಯಿತು, ನಾನೇ ಹೋಗುತ್ತೇನೆ! ನಿನ್ನ ಕೆಲಸ ನೋಡಿಕೋ' ಎಂದ.

ಆ ಕ್ಷಣದಿಂದ ಗಡಿಯಾರದಂಗಡಿಗೆ ಹೋಗಲು ರಮೇಶನ ತಯಾರಿ ಆರಂಭವಾಯಿತು. ಆದಿಮೂರ್ತಿಗೆ ಹೆಚ್ಚು ಬೇಸರವಾಗದಂತೆ, ಸಮಾಧಾನದಿಂದಲೇ ವ್ಯವಹಾರ ಮಾಡಿ ಅವನನ್ನು ಬಿಡಿಸುವುದು ಹೇಗೆಂದು ರಮೇಶ ಯೋಚಿಸುತ್ತಿದ್ದ. ಗಲಾಟೆ ಮಾಡಿ, ಜಗಳ ಆಡಿ ಅಂಗಡಿ ಖಾಲಿ ಮಾಡಿಸುವುದು ಅಷ್ಟೇನು ಕಷ್ಟವಲ್ಲವಾದರೂ ಅದು ಅವನ ಮನಸ್ಸಿಗೆ ಒಗ್ಗದ ರೀತಿ. ಹಾಗಾಗಿ ಮನಸ್ಸಿನಲ್ಲಿ ಅದೊಂದು ಗತಕಾಲದ ಕೆಟ್ಟ ನೆನಪಾಗಿ ಉಳಿಯದಂತೆ ಕೆಲಸ ಸಾಧಿಸಲು ಸಿದ್ಧವಾದ ರಮೇಶ.

ಅವನು ಗಡಿಯಾರದಂಗಡಿಗೆ ಕಾಲಿಟ್ಟಾಗ ಮಧ್ಯಾಹ್ನ ಒಂದು ಗಂಟೆ. ಆದಿಮೂರ್ತಿ ಒಂದು ಗಡಿಯಾರವನ್ನು ಪರೀಕ್ಷಿಸುತ್ತಿದ್ದ. ಅವನನ್ನು ನೋಡಿ 'ಆದಿಮೂರ್ತಿಗಳೇ, ನಿಮ್ಮ ಯಜಮಾನರೇ ಬಂದು ಹೇಳಿದರೆ ನಾನು ಅಂಗಡಿ ಬಿಡ್ತೀನಿ ಅಂತ ನಮ್ಮ ಕೆಲಸಗಾರನ ಹತ್ತಿರ ಹೇಳಿದ್ರಲ್ಲ, ಅದಕ್ಕೆ ನಾನೇ ಬಂದೆ' ಎಂದ.

ಆದಿಮೂರ್ತಿ ತಲೆ ಮೇಲೆತ್ತಿ ಕನ್ನಡಕ ಸರಿಪಡಿಸಿಕೊಂಡು ನೋಡಿದ. 'ನೀವೇ ಬಂದಿದ್ದು ತುಂಬಾ ಒಳ್ಳೇದಾಯ್ತು' ಎಂದು ಹೇಳಿ ಅರೆಕ್ಷಣ ಸುಮ್ಮನಾದ, ಮತ್ತೆ 'ನೀವೀಗ ಇಲ್ಲಿ ಕಾಲಯಂತ್ರದ ಅಂಗಡಿಯಲ್ಲಿ ಅಂದರೆ ಕಾಲನಂಗಡಿಯಲ್ಲಿ ಕಾಲೂರಿದ್ದೀರಿ. ಇಲ್ಲಿ ನಾನು ಹಿಡಿದಿಟ್ಟಿರುವ ಕಾಲ ನಿಮ್ಮ ಅವಕಾಶ(ಜಾಗ)ದಲ್ಲಿ ಬೇರೂರಿದೆ. ಇಲ್ಲಿ ಎರಡೂ ಸೇರಿ 'ಕಾಲಾವಕಾಶ' ಆಗಿದೆ. ಈಗ ಇಲ್ಲಿ ನನಗೆ,